'ನೀಲಿ... ನೀಲಿ... ಪ್ಲೀಸ್.. ನಗಬೇಡಿ, ಹಾಗೆಲ್ಲ... ಇದು ತಮಾಷೆಯ ವಿಷಯ ಅಲ್ಲ!' ಅನ್ನುತ್ತ, ಒಮ್ಮಿಂದೊಮ್ಮೆ ನರ ಸೆಟೆಯಿಸಿ ಒರಲಿಬಿಟ್ಟೆ. ಇಬ್ಬರೂ ಕಂಗಾಲಾಗಿ ಹೋದರು. ಚಿನ್ನುವಂತೂ ಬೆಚ್ಚಿಯೇಬಿಟ್ಟಳು. 'ಸೀರಿಯಸ್ ಆಗಿ ಹೇಳುತಾ ಇದೀನಿ... ಇವೊತ್ತೊಂದು ಇತ್ಯರ್ಥ ಆಗಲೇಬೇಕು. ನ್... ನೋಡು, ನಿನ್ನ ಮನಸಿನಲ್ಲಿ ಅದೇನಿದೆ ಅಂತ ಹೇಳೇಬಿಡು. ಎಷ್ಟೇ ಭಯಾನಕ ಸತ್ಯವಾದರೂ ಕೇಳಿಸಿಕೋತೀನಿ...'

ಇಷ್ಟು ಹೇಳಿ ಪಟ್ಟುಹಿಡಿದು ಕುಳಿತು ಬಿಟ್ಟೆ. ಅಪ್ಪ ಮಗಳಿಬ್ಬರೂ ಮೌನವೇ ಉಳಿದರು. ನನ್ನ ಕಣ್ಣುಗಳಂತೂ, ಎದುರಾಗಬಲ್ಲ ಘನಘೋರ ಸತ್ಯದ ನಿರೀಕ್ಷೆಯಲ್ಲಿ ಸೋತು ಸೋತು ಉಕ್ಕಿ ಉಕ್ಕಿ ಮಿಕ್ಕವು!

'ಅಮ್ಮಾ... ಒಂದು ವಿಷಯ ಕೇಳಿಸಿಕೋ...' ಚಿನ್ನು, ಅಳುಕಿನ ನಡುವೆಯೇ ಧೃತಿ ಸಂಗೋಪಿಸಿ ಹೇಳಿದಳು. 'ಸುಮ್ಮನೆ ನಿನ್ನ ಸಲುವಾಗಿ ಯಾವುದೋ ಗಂಡುದೇಹಕ್ಕೆ ಗಂಡ ಅಂತ ನಾನು ಜೋತುಬೀಳಲಾರೆ... ಯಾರ ಮೇಲಾದರೂ ಮನಸುಂಟಾದ ಕೂಡಲೇ ಅವನನ್ನು ಕರಕೊಂಡು ಬಂದು, ನಿನ್ನೆದುರು ನಿಲ್ಲಿಸುತೀನಿ... ಅಳುಕಿಲ್ಲದೆ ನಿನ್ನೆದುರು ನಿಲ್ಲುತೀನಿ. ಆಗ ಧಾರಾಳವಾಗಿ ಮದುವೆ ಮಾಡಿಕೊಡು...'

ಅಂತಿಂತಲ್ಲದ ಕೆಚ್ಚು ಅದು! ಎಲ್ಲಿ, ಯಾವಾಗ, ಹೇಗೆ ಮತ್ತು ಯಾರಿಂದ ಸಂಪಾದಿಸಿದಳೋ ಯಾರಿಗೆ ಗೊತ್ತು?

ನನ್ನ ಮಾತೂ ಸೋತುಹೋಯಿತು. 'ನಿನ್ನನ್ನು ನಂಬುತೀನಿ, ಚಿನ್ನು... ಮೋಸ ಮಾಡಬೇಡ...' ಅಂತಂದು, ಮಮತೆತಾಳಿ ಮಗಳನ್ನು ಅಪ್ಪಿ ಸಂತೈಸಿದ್ದೆ.

ನಾನೆಂಬ ಅಮ್ಮ ಮತ್ತು ಚಿನ್ನುವೆಂಬ ಮಗಳ ನಡುವೆ ಈ ಪರಿ ಬೆಟ್ಟದಷ್ಟು ವ್ಯತ್ಯಾಸವಿದ್ದೂ, ಇಬ್ಬರ ಹೆಸರುಗಳು ಮಾತ್ರ ಕೊಂಚವೇ ಕೊಂಚ ಹೊಂದಿಬರುವವು. ಒಂದೇ ಲಯದ ಎರಡು ಹೆಸರುಗಳು. ನಾನು ಕನಕವಾರಿ. ಅವಳು ಭಾಸ್ಕರಿ! ಇಬ್ಬರೂ ರಿ–ಕಾರಾಂತ ನಾಮಶೀಲೆಯರೇ! ಭಾಸ್ಕರಿ ಎಂಬುದು ನೀಲಿಯ ಆಯ್ಕೆ. ಹಾಗಂದರೆ ಸೂರ್ಯನಷ್ಟು ಪ್ರಭೆಯುಳ್ಳವಳು ಎಂದರ್ಥವಂತೆ; ಲಕ್ಷ್ಮಿಯ ಅಷ್ಟೋತ್ತರದಿಂದ ಹೆಕ್ಕಿದ್ದು. ಚಿನ್ನು ಎಂಬುದು ನಾನು ಮುದ್ದಿಗೆ ಸುರುಹಚ್ಚಿದ್ದು. ನೆಂಟರಿಷ್ಟರಲ್ಲೂ ಅವಳು ಈಗ್ಗಿಗೂ ಚಿನ್ನುವೇ. ನನ್ನ ಅತ್ತೆಮ್ಮ ಮಾತ್ರ, ಭಾಸ್ಕರೀ ಎಂದು ಪೂರ್ತಿ ಹೆಸರಿನಿಂದ ಮೊಮ್ಮಗಳನ್ನು ಕರೆಯುವರು.

ಇರಲಿ, ಅವೊತ್ತು ಚಿನ್ನು, ಮದುವೆಯ ಮನಸುಂಟಾದ ದಿವಸ ಹುಡುಗನನ್ನು ತಾನೇ ಕರೆತರುವೆನೆಂದು ಆಡಿ ಅತ್ತಾಗ, ನಾನೂ ಅತ್ತಿದ್ದೆನಷ್ಟೆ– ಎಂತಹ ಮೆಲೋಡ್ರಾಮಾ ಅದು. ನೆನಪಾದರೆ ಇವೊತ್ತಿಗೂ ಝಿಲ್ಲನಿಸುವುದು. ಮೂರೇ ಮೂರಾದ ನಾವು ಮೂರೂ ಮಂದಿ, ಈ ಘಟನೆಯ ನಂತರ, ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥೈಸಿಕೊಂಡೆವು. ನಾನು ಅಷ್ಟೆ, ನನ್ನ ಗಂಡನನ್ನೂ ಮೊದಲಿಗಿಂತಲೂ ಹೆಚ್ಚು ಅರ್ಥ ಮಾಡಿಕೊಂಡೆ. ಈ ದಿನಗಳಲ್ಲೇ ಒಂದು ರಾತ್ರಿ, ಊಟದ ಮೇಜಿನಲ್ಲಿ ಯಾವುದೋ ವಿಷಯದ ನಡುವೆ, ನೀಲಿ, ನಮ್ಮಿಬ್ಬರ ಮದುವೆಯ ವಿಚಾರವನ್ನು ಚಿನ್ನುವಿಗೆ ತಿಳಿಹೇಳಿದರು. ನಮ್ಮಿಬ್ಬರ ಮದುವೆ ಅರೇಂಜಾದ ರೀತಿಯ ಬಗ್ಗೆ. ವಿಚಿತ್ರವಾದ ಕಥೆ ಅದು!

'ಬನಶಂಕರಿಯಲ್ಲಿ ಶೇಷಪ್ಪಯ್ಯ ಅಂತೊಬ್ಬರಿದ್ದರು' ಅನ್ನುತ್ತ ನೀಲಿ ಸುರು ಹಚ್ಚಿಕೊಂಡರು. 'ಅದೇ ಕಣೇ ಶೇಷೂ ತಾತ ಅಂತ ಒಬ್ಬರು ಸದಾ ಕೊಡೆ ಹಿಡಕೊಂಡು ಅಜ್ಜೀನ ನೋಡೋಕೆ ಬರುತಿದ್ದರಲ್ಲ... ನೀನು ಅವರಿಗೆ ಕೊಡೆತಾತ ಅಂತಿದ್ದೆ ನೋಡು ಅವರೇ ಈ ಶೇಷೂ ತಾತನೇ